ದಿನಾಂಕ **28-12-2022** ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

## ಮುಖ್ಯ ವಿಚಾರಣೆ ಶ್ರೀ ಎ ವಿ ಕೆ ವಕೀಲರಿಂದ

ಸಾಕ್ಷಿಯು ಈಗಾಗಲೇ ನ್ಯಾಯಾಲಯಕ್ಕೆ ಹಾಜರುಪಡಿಸಿರುವ ಪ್ರಮಾಣಿಕೃತ ಹೇಳಿಕೆಯನ್ನು ತನ್ನ ಮುಖ್ಯ ವಿಚಾರಣೆಯನ್ನಾಗಿ ಪರಿಗಣಿಸಬೇಕೆಂದು ಕೇಳಿಕೊಂಡ ಕಾರಣ ಸದರಿ ಪ್ರಮಾಣಿಕೃತ ಹೇಳಿಕೆಯನ್ನು ಪಿರ್ಯಾಧಿ.ದಾರನು ಮುಖ್ಯ ವಿಚಾರಣೆಯನ್ನಾಗಿ ಪರಿಗಣಿಸಲಾಯಿತು. ಸಾಕ್ಷಿಯು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ತನ್ನ ಪರವಾಗಿ ನಿಶಾನೆ ಗೊಳಿಸಲು ಕೇಳಿಕೊಂಡಿರುತ್ತಾರೆ.

ಸಾಕ್ಷಿಯು ದಿನಾಂಕಃ **15-1-2021** ರ ಎಸ್.ಬಿ.ಐ ಬ್ಯಾಂಕ್ ಸಂಡೂರು ಶಾಖೆಯ ಮೂಲ ಚೆಕ್‌ನ ಹಾಜರುಪಡಿಸಿದ್ದು ಅದನ್ನು ನಿಪಿ **1** ಎಂದು, ನಿಪಿ **1** ರಲ್ಲಿರುವ ಆರೋಪಿಯ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿಪಿ **1** ಎ ಎಂದು, ಎಸ್.ಬಿ.ಐ ಬ್ಯಾಂಕ್ ಸಂಡೂರು ಶಾಖೆಗೆ ಚೆಕನ್ನು ಹಾಜರು ಮಾಡಿದ ರಶೀದಿಯನ್ನು ನಿಪಿ **2** ಎಂದು, ದಿನಾಂಕಃ **24-2-2021** ರ ಎಸ್.ಬಿ.ಐ ಬ್ಯಾಂಕ್ ಸಂಡೂರು ಶಾಖೆಯ ಹಿಂಬರಹವನ್ನು ಹಾಜರುಪಡಿಸಿದ್ದು ಅದನ್ನು ನಿಪಿ **3** ಎಂದು, ದಿನಾಂಕಃ **01-03-2021** ರಲ್ಲಿ ಆರೋಪಿಗೆ ನೀಡಿದ ಕಾನೂನು ತಿಳುವಳಿಕೆಯ ಕಚೇರಿ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ **4** ಎಂದು, ಆರೋಪಿಗೆ ಕಳುಹಿಸಿದ ಕಾನೂನು ತಿಳುವಳಿಕೆ ನೋಟಿಸ ವಾಪಸ್ಸು ಆದ ಆರ್.ಪಿ.ಡಿ ಲಕೋಟೆಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ **5** ಎಂದು ಅದರಲ್ಲಿರುವ ನೋಟಿಸಿನ ಪ್ರತಿಯನ್ನು ನಿಪಿ **5** ಎಂದು, ಅಂಚೆ ರಶೀದಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ **6** ಎಂದು, ಸಾಕ್ಷಿಯು ಖಾತೆ ನಂಬರ **919020005530619** ಇದರ ಸ್ಟೆಂಟಮೇಂಟನ್ನು ಹಾಜರುಪಡಿಸಿದ್ದು ಅದನ್ನು ನಿಪಿ **7** ಎಂದು, ಸಾಕ್ಷಿಯು ಖಾತಾ ನಂಬರ **50200012356562** ಇದರ ಬ್ಯಾಂಕ್ ಸ್ಟೆಂಟ ಮೆಂಟನ್ನು ಹಾಜರುಪಡಿಸಿದ್ದು ಅದನ್ನು ನಿಪಿ **8** ಎಂದು, ಸಾಕ್ಷಿಯು ಖಾತಾ ನಂಬರ **911010060847236** ಇದರ ಬ್ಯಾಂಕ ಸ್ಟೆಂಟ ಮೆಂಟನ್ನು ಹಾಜರುಪಡಿಸಿದ್ದು ಅದನ್ನು ನಿಪಿ **9** ಎಂದು, ಸಾಕ್ಷಿಯು ಖಾತಾ ನಂಬರ **50100142652274** ಇದರ ಬ್ಯಾಂಕ ಸ್ಟೆಂಟ ಮೆಂಟನ್ನು ಹಾಜರುಪಡಿಸಿದ್ದು ಅದನ್ನು ನಿಪಿ **10** ಎಂದು, ಸಾಕ್ಷಿಯ ಖಾತ ನಂಬರ **920060049776923** ಇದರ ಸೆಂ್ಟಟ ಮೆಂಟನ್ನು ಹಾಜರುಪಡಿಸಿದ್ದು ಅದನ್ನು ನಿಪಿ **11** ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶವನ್ನು ಕೋರಿದ್ದು ಅನುಮತಿಸಿ ಸಮಯಾವಕಾಶವನ್ನು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ.

ಪ್ರ.ದ.ನ್ಯಾ.ದಂ., ಸಂಡೂರು.